A.—Sri H. SIDDAVEERAPPA (Minister for Home and Industries) .—

(*a*) Nearly 10 months.

(*b*) Gross income from June 1952 to end of January 1953 is Rs. 23,63,842.

(*c*) The accounts have not yet been audited to gauge the result of this period.

(*d*) Does not arise in view of reply to (*c*).

ಶ್ರೀ ಬಿ. ಎಕ್. ಬೋರಣ್ಣಗೌಡ.—ತಾವು (ಬಿ) ಪ್ರಶ್ನೆಗೆ ಉತ್ತರವಾಗಿ 23,63,842 ರೂಪಾಯಿಗಳ ರಾಭ ಬಂದಿದೆ ಎಂದು ತಿಳಿಸಿದ್ದೀರಿ. ಇದು ತಮಗೆ ಹೇಗೆ ಗೊತ್ತಾಯಿತು ?

ಶ್ರೀ ಎಚ್. ಸಿದ್ದವೀರಪ್ಪ.—ತಿಂಗಳಿಗೆ gross collection ಎಷ್ಟು ಬರುತ್ತದೆಯೋ ನೋಡಿ ಕೊಂಡು ಅದರಲ್ಲಿ ಖರ್ಚು ಅಂದಾಜು ಎಷ್ಟು ಹೋಗ ಬಹುದೆಂದು ಲೆಕ್ಕ ಹಾಕಿ ಸಾಮಾನ್ಯವಾಗಿ ಹೇಳ ಬಹುದು. ಅದು ಸಿಕ್ಕುತ್ತದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ತಾವು (ಸಿ) ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಇನ್ನೂ ಲೆಕ್ಕಗಳು ಆಡಿಟ್ ಆಗಿಲ್ಲವೆಂದು ತಿಳಿಸಿದ್ದೀರಿ. ಆದ್ದರಿಂದ ಈ ವಿಚಾರ ತಮಗೆ ಹೇಗೆ ಗೊತ್ತಾಯಿತು ?

ಶ್ರೀ ಎಚ್. ಸಿದ್ದವೀರಪ್ಪ.—ಆಡಿಟ್ ಆಗಬೇಕಾಗಿದೆ. ಆದರೆ ತಾವೀಗ ಕೇಳಿದ ಪ್ರಶ್ನೆಗೆ ಜವಾಬು ಕೊಡುವಾಗ ಖರ್ಚುಗಳನ್ನು ಕಳೆದ ನಂತರ ಉಳಿಯ ತಕ್ಕ ಹಣ ಎಷ್ಟಾಗುತ್ತದೆಂಬುದನ್ನು ನೋಡಿಕೊಂಡು ಹೇಳಬೇಕಾಗುತ್ತದೆ.

Mr. SPEAKER.—The period asked for is from June to September. Why have the Government given figures up to January 1953 ? That is his point.

Sri H. SIDDAVEERAPPA.—I could not confine myself to June to September. I am sorry there is some mistake. I ought to have given the answer to the question as asked. In that particular period from June to September it is no doubt true that the expenditure has exceeded the receipts.

ಶ್ರೀ ಡಿ. ಆರ್. ಕರಿಗೌಡ.—ಜನವರಿ ತಿಂಗಳಿನಲ್ಲಿ ರಾಭ ಹೆಚ್ಚಾಗಿ ಬಂದಿದೆಯೆಂದು ಹೇಳಿದ್ದೀರಿ.

ಅಧ್ಯಕ್ಷರು.—ಆ ಪ್ರಶ್ನೆಯ ಭಾಗಕ್ಕೆ ಕೊಟ್ಟಿರುವ ಉತ್ತರ ಸರಿಯಾಗಿಲ್ಲವೆಂದು ಹೇಳಿದ್ದಾರೆ.

Conditions imposed for permission to stock paddy in rice mills.

Q.—606. Sri N. HUCHMASTHY GOWDA (Huliyurdurga) .—

Will the Government be pleased to state :—

(*a*) the number of rice mills in the State permitted to stock paddy since January 1948 up to 31st January 1953 ;

(*b*) the conditions imposed by them on the rice mill owners while permitting them to stock and to hull paddy ;

(*c*) of the mills so permitted, the number of rice mill owners who have complied with these conditions ;

(*d*) the number and names of rice mills which have violated the conditions ;

(*e*) whether there are any instances of rice mills stocking or hulling paddy without obtaining a permit ?

A.—Sri H. SIDDAVEERAPPA (Minister for Home and Industries) .—

(*a*)	1948	.. 191
	1949	.. 196
	1950	.. 205
	1951	.. 215
	1952	.. 212
	1953	.. 218

(Excluding the number of rice mills in Bangalore, Kolar and Chitaldrug Districts) .

In Bangalore, Chitaldrug and Kolar Districts, paddy is being purchased in separate Government Depots and released later on for hulling in rice mills through Government agency. The mill owners are not permitted to stock paddy in these districts. The number of mills available in these districts are noted below :—

Bangalore	..	8
Chitaldrug	..	3
Kolar	..	1
Total	..	12

(SRI H. SIDDAVEERAPPA.)

(*b*) Conditions prescribed in the rice mill owners' agreement, 1950 and other Standing Orders and those prescribed for licences under the Rice Mill Control Order 1951.

(*c*) Number of Rice Mills.—

1948	..	190
1949	..	194
1950	..	202
1951	..	204
1952	..	188

(*d*) Statement appended below.

(*e*) Only one rice mill (in Manchanahally, Krishnarajanagar Taluk was hulling paddy) without a licence. This was stopped as soon as it was noticed.

[*Vide* Reply to Clause (*d*).]

Statement showing the number of Rice Mills which have violated the conditions:—

Year	No. of Rice Mills violating the conditions	Name of Rice Mills
		MYSORE DISTRICT.
1948—		
1	1	Ramalingeswara Rice Mills, Mysore.
1949—		
2	1	Shankarananda Rice Mills Mysore.
	2	Srinivasa Rice Mills, Mysore.
1950—		
3	1	Amin Rice Mills, Bannur, T.-Narsipur Taluk.
	2	S.C.V.D.S. Rice Mills, Krishnarajanagar.
	3	Chandranatha Rice Mills, Mayagowdanahally, K.R. Nagar.
1951—		
10	1	Satyanarayana Rice Mills Mysore City.
	2	Srinivasa Rice Mills, T.-Narsipur.
	3	Ramalingeswara Rice Mills, T.-Narsipur.
	4	Karnataka Rice Mills, Hampapur, K.R. Nagar Taluk.
	5	Lakshminarayanaswamy Rice Mills, Harambally.
	6	Shankarananda Rice Mills, Mirle.
	7	Saraswathi Rice Mills, Mirle.
	8	Padmamba Rice Mills, Saligrama.
	9	Basaveswaraswamy Rice Mills, Hebbal.
	10	Chandranatha Rice Mills, Mayagowdanahally.
1952—		
15	1	Srinivasa Rice Mills, T.-Narsipur.
	2	Ramalingeswara Rice Mills, T.-Narsipur.
	3	Karnataka Rice Mills, Hampapur, K.R. Nagar Taluk.
	4	Shankarananda Rice Mills, Mirle, K.R. Nagar Taluk.
	5	Gayatri Rice Mills, Mirle, K.R. Nagar Taluk.
	6	Saraswathi Rice Mills, Mirle, K.R. Nagar Taluk
	7	Kshetrapala Rice Mills, Saligrama, K.R. Nagar Taluk.
	8	Srikanta Rice Mills, Saligrama, K.R. Nagar Taluk.
	9	Venkateswara Rice Mills, Manchanahally, K.R. Nagar Taluk.
	10	Srikanteswara Rice Mills, Nanjangud.
	11	Saraswathi Rice Mills, Nanjangud.
	12	Rajarajeswari Rice Mills, Nanjangud.
	13	Malleswar Rice Mills, Hullahalli.
	14	Nanjundeswara Rice Mills, Nanjangud.
	15	Panchalingeswara Rice Mills, Basavanapura, Nanjangud Taluk.
1953	Nil so far.	

Year	No. of Rice Mills violating the conditions	Name of Rice Mills

SHIMOGA DISTRICT.

1952—		
6	1	Sri Rajasekhara Rice Mills, Salur.
	2	Sri Vinayaka Rice Mills, Goddanakoppa.
	3	Sri S. M. Khan Rice Mills, Bhadravathi.
	4	Sri Bharat Rice Mills, Anavatti.
	5	Sri Gangadhara Rice Mills, Shiralkoppa.
	6	Sri Sharada Rice Mills, Shiralkoppa.

TUMKUR DISTRICT.

1951—		
1	1	Sri Sheriff Rice Mills, Kunigal.
1952—		
3	1	Sri Jayadeva Rice Mills, Gubbi.
	2	Sri Renuka Rice Mills, Madhugiri.
	3	Sri Parswanatha Rice Mills, Tumkur.
1953—		
1	1	Sri Ranganatha Rice Mills, Sira.

ಶ್ರೀ ಎಚ್. ಹುಚ್ಚಮಾಸ್ತಿಗೌಡ —ತಾವು ಯಾವ ಯಾವ ಮಿಲ್ಲನವರು ಅವರು ಬರದುಕೊಟ್ಟಿದ ಷರತ್ತುಗಳನ್ನು ಮೀರಿದ್ದಾರೆ ಎಂಬ ಬಗ್ಗೆ ತನಿಖೆ ಮಾಡಿ, ಅದನ್ನೆಲ್ಲಾ ನಿರ್ಧಾರ ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಬಗ್ಗೆ ಒಂದು long ist ಮಾತ್ರ ನನ್ನಲ್ಲಿದೆ. ಅದನ್ನು ಟೇಬಲ್ ಮೇಲೆ ಇಡುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಒಟ್ಟಿನಲ್ಲಿ ಮಿಲ್ಲುಗಳಲ್ಲಿ ಬತ್ತವೇನಾದರೂ ಕಮ್ಮಿ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವು ಮಿಲ್ಲುಗಳಲ್ಲಿ ಬಂದಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಕಮ್ಮಿ ಬಂದಿರುವ ಬತ್ತವನ್ನು ಅವರಿಂದ ವಸೂಲು ಮಾಡುವುದಕ್ಕೆ ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ವಸೂಲು ಮಾಡುತ್ತಿದ್ದೇವೆ. ಕೆಲವು ಕಡೆಗಳಲ್ಲಿ ಅವರಿಂದ ಹಣ ವಸೂಲು ಮಾಡಿದೆ. ಇನ್ನು ಕೆಲವು ಕಡೆ ಅವರ ಒಪ್ಪಂದದ ಪ್ರಕಾರ ಏನೇನು ಷರತ್ತುಗಳಿವೆಯೋ ಅವುಗಳಿಗನುಸಾರವಾಗಿ ಕಾರ್ಯಕ್ರಮ ಕೈಗೊಂಡಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ —ಇದುವರೆಗೆ ಎಷ್ಟು ವಸೂಲಾಗಿದೆಯೆಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ನಿಖರವಾಗಿ ಎಷ್ಟು ವಸೂಲಾಗಿದೆಯೆಂದು ಹೇಳುವುದಕ್ಕೆ ನೋಟೀಸ್ ಬೇಕು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—1948ನೆಯ ಇಸವಿಯಲ್ಲಿ ಒಂದು ಮಿಲ್ ಮಾತ್ರ ಷರತ್ತಿನಂತೆ ನಡೆದುಕೊಳ್ಳದೆ ಇದ್ದು ಪ್ರತಿ ವರ್ಷವೂ ಹೆಚ್ಚುತ್ತಾ ಬಂದು 1952ನೆಯ ಇಸವಿಗೆ 54 ಮಿಲ್ಲುಗಳು ಷರತ್ತಿನ ಪ್ರಕಾರ ನಡೆಯದಂಥವು ಇರುವುದಕ್ಕೆ ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಅಕ್ಕಮಗಳು ಈ ರೀತಿ ಹೆಚ್ಚಿಗೆ ನಡೆಯುತ್ತಿರುವುದೇ ಕಾರಣ. ವರ್ಷೇ ವರ್ಷೇ ಅಗ್ರಿಮೆಂಟ್ ಪ್ರಕಾರ ನಡೆಯುವವರ ಸಂಖ್ಯೆ ಕಡಮೆಯಾಗಿದೆಯೆಂದು ಇಲ್ಲಿ ಕೊಟ್ಟಿರುವ ಸಂಖ್ಯೆಯಿಂದ ಗೊತ್ತಾಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅದು ಸ್ಪಷ್ಟವಾಗಿದೆ, ಈ ರೀತಿಯಾಗಿ ವರ್ಷೇ ವರ್ಷೇ ಷರತ್ತಿನ ಪ್ರಕಾರ ನಡೆದುಕೊಳ್ಳದಿರುವವರ ಸಂಖ್ಯೆ ಜಾಸ್ತಿಯಾಗುವುದಕ್ಕೆ ಕಾರಣವೇನು ?

Sri H. SIDDAVEERAPPA.—Rice Mill owners have not struck to their agreement. They have violated these conditions.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನರ್ಕಾರದವರೇನಾದರೂ ಷರತ್ತುಗಳ ಪ್ರಕಾರ ನಡೆದುಕೊಳ್ಳದೇ ಇದ್ದರೂ ಪರವಾಗಿಲ್ಲವೆಂಬ ನೀತಿಯನ್ನು ಅನಿರ್ದಿಷ್ಟವಾಗಿಯೇನಾದರೂ ಇಟ್ಟಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ, ಇಲ್ಲ. we have been very stern and strict.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—(c) ಪ್ರಶ್ನೆಗೂ, (a) ಪ್ರಶ್ನೆಗೂ ಕೊಟ್ಟಿರುವ ಉತ್ತರದಲ್ಲಿ ವ್ಯತ್ಯಾಸ ವಿರಲು ಕಾರಣವೇನು? (c) ಪ್ರಶ್ನೆಯಲ್ಲಿ ಷರತ್ತುಗಳ ಪ್ರಕಾರ ನಡೆದುಕೊಂಡಿರುವವರ ಸಂಖ್ಯೆ 190, 194, 202, 204, 188 ಎಂದು ಹೇಳಿದೆ. (a) ಪ್ರಶ್ನೆಯಲ್ಲಿ ಒಟ್ಟು ಪರ್ಮಿಟ್ ಪಡೆದಿರುವವರ ಸಂಖ್ಯೆ ಹೇಳಿದೆ. ಇವೆರಡರ ವ್ಯತ್ಯಾಸವೇ ಷರತ್ತುಗಳ ಪ್ರಕಾರ ನಡೆದುಕೊಳ್ಳದವರ ಸಂಖ್ಯೆ. ಇದರ ಪ್ರಕಾರ ನೋಡಿದಲ್ಲಿ ಈ ಸಂಖ್ಯೆ 1948ಕ್ಕೆ ಒಂದು, 1949ಕ್ಕೆ ಎರಡು, 1950ಕ್ಕೆ ಮೂರು, 1951ಕ್ಕೆ 11, 1952ಕ್ಕೆ 24 ಇರಬೇಕು. ಇದಕ್ಕೆ ಬದಲಾಗಿ (a) ಪ್ರಶ್ನೆಗೆ ಉತ್ತರ ಕೊಡುತ್ತಾ 1951ನೆಯ ಇಸವಿಗೆ 11 ಇರಬೇಕಾದಲ್ಲಿ 10 ಎಂತಲೂ, 1952ಕ್ಕೆ 24 ಇರಬೇಕಾದಲ್ಲಿ 15 ಎಂತಲೂ ಕೊಟ್ಟಿದ್ದಾರೆ. ಈ ಎರಡು ಅಂಕಿಗಳಲ್ಲಿ ಯಾವುದು ಸರಿಯಾದದ್ದು ?

Sri H. SIDDAVEERAPPA.—I will get it verified.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—(c) ಪ್ರಶ್ನೆಗೆ ಉತ್ತರದಲ್ಲಿ ಪರ್ಮಿಟ್ ಇಲ್ಲದೆ ಬತ್ತ ಸ್ವಾಕ್ ಮಾಡಿರುವವರ ಮತ್ತು ಹರ್ ಮಾಡಿರುವವರ ಸಂಖ್ಯೆ ಒಂದು ಎಂದು ಹೇಳಿದೆ. ಇವರು ಯಾರು ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲೇ ಹೇಳಿದೆಯಲ್ಲ. ಕೃಷ್ಣರಾಜನಗರ ತಾಲ್ಲೂಕು, ಮಾಂಚನಹಳ್ಳಿಯದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅದರ ಮಾಲೀಕರು ಯಾರು ?

ಅಧ್ಯಕ್ಷರು.—ಆಗಲೇ ಹೇಳಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಎಷ್ಟು ದಿವಸ ಈ ರೀತಿಯಾಗಿ ಪರ್ಮಿಷ್ಟ ಇಲ್ಲದೆ ಬತ್ತವನ್ನು ಸ್ಟಾಕ್ ಮಾಡಿ ಹರ್‌ಮಾಡಿಕೊಂಡು ಬಂದಿದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪ.—ಅವರ ಮಿಲ್ಲಿಗೆ ಬತ್ತ ಕೊಟ್ಟಿದ್ದು 10-10-1952ರಲ್ಲಿ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅಷ್ಟು ದಿವಸದಿಂದ ಅವರು ಪರ್ಮಿಷ್ಟ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಪ್ರಥಮತಃ ಅವರಿಗೆ ಬತ್ತ ಕೊಟ್ಟಿರುವುದೇ ನನಗೆ ಬಂದಿರತಕ್ಕ ವರದಿಯ ಪ್ರಕಾರ 10-10-1952ರಲ್ಲಿ. ಆಮೇಲೆ ಇತ್ತೀಚೆಗೆ ಲೈಸೆನ್ಸ್ ಕೊಡಬೇಕೆಂದು ಅರ್ಜಿಹಾಕಿಕೊಂಡಿದ್ದಾರೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇಷ್ಟು ದಿವಸ ಪರ್ಮಿಷ್ಟ ಇಲ್ಲದೆ ಮಿಲ್ ನಡೆಸಿದ್ದಕ್ಕಾಗಿ ಅವರಮೇಲೆ ಕಾರ್ಯಕ್ರಮ ಕೈಕೊಂಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಈ ವರ್ಷ ಬತ್ತ ಕೊಡುವುದನ್ನು ನಿಲ್ಲಿಸಿದೆ. ಲೈಸನ್ಸ್ ತೆಗೆದುಕೊಳ್ಳದೆ ಅವರ ಬತ್ತ ತೆಗೆದುಕೊಳ್ಳಕೂಡದೆಂದು ಹೇಳಿದ್ದೇವೆ. ಈ ಸಾರಿ ಬತ್ತದ allotment ಆ ಮಿಲ್ಲಿಗೆ ಮಾಡಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—1950-51ನೆಯ ಇಸವಿಯಲ್ಲಿ ಮಾಡಿದ ಮಿಲ್‌ಮಾಲೀಕರ ಒಪ್ಪಂದದ ಪ್ರಕಾರ ಇದಕ್ಕೆ ಇಷ್ಟುಮಾತ್ರ ಶಿಕ್ಷೆ ವಿಧಾಯಕವಾಗಿದೆಯೇ ಅಥವಾ ಇನ್ನೂ ಹೆಚ್ಚಿಗೆ ವಿಧಾಯಕವಾಗಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇನ್ನೂ ಆ ಫೈಲು close ಆಗಿಲ್ಲ. ಡೆಪ್ಯುಟಿ ಕಮಿಷನರಿಂದ ರಿಪೋರ್ಟ್ ಕರೆದಿದ್ದೇವೆ. ಅದು ಬಂದಮೇಲೆ ಏನೇನು ಕಾರ್ಯಕ್ರಮ ಕೈಕೊಳ್ಳುವ ಅವಶ್ಯಕತೆಯಿದೆಯೋ ಅದನ್ನು ಕೈಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಹೆಚ್. ಹುಚ್ಚಮಾಸ್ತಿಗೌಡ.—ಬತ್ತದ shortage ಏನಾದರೂ ಆ ಮಿಲ್ಲಿನಲ್ಲಿ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಸ್ವಲ್ಪ ಬಂದಿದೆಯೆಂದು ವರದಿಯಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಅದನ್ನೇನಾದರೂ ಆ ಮಿಲ್ಲಿಂದ ವಸೂಲು ಮಾಡಿದ್ದೀರಾ ?

Sri H. SIDDAVEERAPPA.—I want notice.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈಗಲಾದರೂ ಷರತ್ತಿನ ಪ್ರಕಾರ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಯೋಚನೆಮಾಡುತ್ತಾರೆಯೇ ?

Sri H. SIDDAVEERAPPA.—As I have already said, the file is not yet closed. Government have not passed final orders in the matter. I am awaiting the report of the Deputy Commissioner.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನಾನು ಈ ಒಂದು ಮಿಲ್ಲಿಗೆ ಅನ್ವಯಿಸುವಂತೆ ಕೇಳುತ್ತಿಲ್ಲ. ಷರತ್ತುಗಳ ಪ್ರಕಾರ ನಡೆದುಕೊಳ್ಳದಿರುವ ಎಲ್ಲ ಮಿಲ್ಲುಗಳ ಮೇರೆಯೂ ನೂಕ್ತವಾಗಿ ಶಿಸ್ತಿನಿಂದ ಕಾರ್ಯಕ್ರಮ ಕೈಕೊಳ್ಳುತ್ತೀರಾ ?

Sri H. SIDDAVEERAPPA.—We have already taken action. In view of the fact that in one of the cases, the matter is pending before the High Court, I do not want to hazard any answer until the case is disposed of.

ಶ್ರೀ ಎಸ್. ಎಚ್. ತಮ್ಮಯ್ಯ ಉರುಫ್ ಹನುಮಂತೇಗೌಡರ ತಮ್ಮಯ್ಯ.—ಅವರಿಗೆ ಬತ್ತ ಶೇಖರಣೆ ಮಾಡುವುದಕ್ಕೆ ಅಪ್ಪಣೆ ಕೊಟ್ಟವರು ಯಾರು ?

ಶ್ರೀ ಎಚ್. ಸಿದ್ದವೀರಪ್ಪ.—ಯಾರಿಗೆ ?

ಶ್ರೀ ಎಸ್. ಎಚ್. ತಮ್ಮಯ್ಯ.—ಮಂಚೇನಹಳ್ಳಿ ರೈಸ್‌ಮಿಲ್ಲಿಗೆ.

ಶ್ರೀ ಎಚ್. ಸಿದ್ದವೀರಪ್ಪ.—ಅಮಲ್ದಾರರು.

ಶ್ರೀ ಎಸ್. ಎಚ್. ತಮ್ಮಯ್ಯ.—ಮೇಲ್ಪಟ್ಟ ಅಧಿಕಾರಿಗಳ ಅಪ್ಪಣೆಯಿಲ್ಲದೆ ಕೊಟ್ಟರೇ ?

ಶ್ರೀ ಎಚ್. ಸಿದ್ದವೀರಪ್ಪ.—ಡೆಪ್ಯುಟೀಕಮಿಷನರ ಆಫೀಸಿನಲ್ಲಿ ಯಾವ ರಿಕಾರ್ಡೂ ಇಲ್ಲ. ಈಗ ಬಂದಿರುವ ವರದಿಯ ಪ್ರಕಾರ ಅಮಲ್ದಾರರು ಮುಚ್ಚಳಿಕೆ ತೆಗೆದುಕೊಂಡು ಕೊಟ್ಟರು ಎಂದು ಗೊತ್ತಾಗಿದೆ. ಇದು irregular. ಆದ್ದರಿಂದ ಯಾರು ಕೊಟ್ಟರು, ಹೇಗೆ ಕೊಟ್ಟರು ಎಂಬ ಬಗ್ಗೆ ತನಿಖೆ ನಡೆಯುತ್ತಿದೆ.

ಎಸ್. ಗೋಪಾಲಗೌಡ.—Shortage ಬಂದಿರುವ ಮಿಲ್ಲುಗಳಲ್ಲಿ ಕಾಂಗ್ರೆಸ್ ಮಿಲ್ಲುಗಳೆಷ್ಟು ?

ಶ್ರೀ ಎಚ್. ಸಿದ್ದವೀರಪ್ಪ.—ಕಾಂಗ್ರೆಸ್ ಮಿಲ್ಲುಗಳು ಯಾವುವೂ ಇಲ್ಲ; ಸೋಷಿಯಲಿಸ್ಟ್ ಮಿಲ್ಲುಗಳು ಯಾವುವು ಇವೆಯೋ ಗೊತ್ತಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈ ವ್ಯಾಪಾರದಲ್ಲಿ ಕಾನೂನು ರೀತ್ಯಾ ಮಿಲ್‌ಮಾಲೀಕರುಗಳು ಮತ್ತು ಸರ್ಕಾರದವರು ಇಬ್ಬರೂ ತಪ್ಪಿತಸ್ಥರಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಸರ್ಕಾರದವರು ತಪ್ಪಿತಸ್ಥರಾಗುವುದಿಲ್ಲ. ಅಗ್ರಿಮೆಂಟ್ ತಾವು ನೋಡಬೇಕು. ಸರ್ಕಾರದವರದೇನೂ ತಪ್ಪಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಕಳೆದ ವರ್ಷವೂ ಬತ್ತದ ಜಡ್ತಿ ಆಗಿತ್ತಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಕಾನೂನು ಪ್ರಕಾರ ಏನೇನು ಆಗಬೇಕೋ ಅದು ಆಗುತ್ತಿದೆ. It is only at a particular given point of time when the quantity is measured and when the shortage is found, then action is to be taken. In the agreement it is very clearly stated that the mill owner is responsible for keeping the actual stock in tact. Government are not at all to be blamed.

ಶ್ರೀ ಎಸ್. ಗೋಪಾಲಗೌಡ.—ನನ್ನ ಪ್ರಶ್ನೆ ಅದಲ್ಲ. ಕಳೆದ ವರ್ಷ ಸರ್ಕಾರದವರು ಸ್ಟಾಕನ್ನು ಜಡ್ತಿ ಮಾಡಿದ್ದಾರೆಯೇ ಇಲ್ಲವೇ ?

Sri H. SIDDAVEERAPPA.—Yes. Unless the contrary is proved I have to presume every year everything has been done according to the rules.

ಶ್ರೀ ಎಸ್. ಗೋಪಾಲಗೌಡ.—ಕಳೆದ ವರ್ಷವೂ ಈ ರೀತಿ ಕೊರತೆ ಬಿದ್ದುದು ಯಾವುದಾದರೂ ಮಿಲ್ಲಿನ ವಿಷಯದಲ್ಲಿ ನಮೂದು ಮಾಡಲಾಗಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಹೇಳುವುದಕ್ಕೆ ನೋಟೀಸ್ ಬೇಕು.

ಶ್ರೀ ಎಸ್. ಗೋಪಾಲಗೌಡ.—ಈ ವರ್ಷದ ಕೊರತೆಯನ್ನು declare ಮಾಡಿದರಲ್ಲಿ ಕಳೆದ ವರ್ಷಗಳಿಂದ accumulate ಆಗಿದ್ದುದೆಲ್ಲಾ ಸೇರಿದಯಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದು ನನಗೆ ಗೊತ್ತಿಲ್ಲ. ಯಾವ ವರ್ಷದ್ದು, ಏನು, book balance ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಕಡಮೆಯಿದೆಯೆಂಬುದನ್ನು verify ಮಾಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.— ಹಾಗಾದರೆ ಕಳೆದ ವರ್ಷ ತಾವು ತನಿಖೆ ನಡೆಸಿದ ಕಾಲದಲ್ಲಿ, ಈ ಮಿಲ್ಲುಗಳಲ್ಲಿ shortage ಇಲ್ಲವೆಂದು ಭಾವಿಸಿರಾಯಿತೇ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್ ಬೇಕು. ಹೋದ ವರ್ಷದ ರಿಪೋರ್ಟು ನನ್ನಲ್ಲಿಲ್ಲ.

ಶ್ರೀ ಎಸ್. ಎಂ. ಮರಿಯಪ್ಪ.—ಸ್ವಾಮಿ, ಆ ಮಿಲ್ಲಿಗೆ ಸರ್ಕಾರಿ ಡಿಪೋವಿನಿಂದ ಬತ್ತವನ್ನು ಹರ್ ಮಾಡುವುದಕ್ಕೆ ಕೊಟ್ಟಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಸರ್ಕಾರಿ ಡಿಪೋ ತೆರೆದು ಬತ್ತವನ್ನು ಹರ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇವೆ.

ಶ್ರೀ ಎಸ್. ಎಂ. ಮರಿಯಪ್ಪ.—ಬತ್ತ ಸ್ವಾಕ್ ಮಾಡಿದರೆ ವರ್ಷಕ್ಕೆ ಪಲ್ಲಕ್ಕೆ ಎಷ್ಟು ಇಳುವರಿ ಬರುತ್ತದೆ ?

ಶ್ರೀ ಎಚ್. ಸಿದ್ದವೀರಪ್ಪ.—ಬತ್ತ ಯಾವ ಕಾರಣದಿಂದ ಕಡಿಮೆ ಬಂದಿದೆ ಎಂದು ಹೇಳಿಲ್ಲ, ಕಡಿಮೆ ಇದೆ ಎಂದು ಹೇಳಿದೆ.

ಶ್ರೀ ಎಸ್. ಎಂ. ಮರಿಯಪ್ಪ.—ಅವರಿಂದ ಲೈಸೆನ್ಸಿಗಾಗಿ ಅರ್ಜಿ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಲೈಸೆನ್ಸ್ ಕೊಡುವುದು ನಾನಲ್ಲ, ಡೈರೆಕ್ಟರ್ ಆಫ್ ಫುಡ್ ಸಪ್ಲೈಸ್.

ಶ್ರೀ ಎಸ್. ಎಂ. ಮರಿಯಪ್ಪ.—ನಿಮಗೂ ಅರ್ಜಿ ಬಂದಿತ್ತೆ ?

ಶ್ರೀ ಎಚ್. ಸಿದ್ದವೀರಪ್ಪ.—ನನಗೆ ಬಂದಿದ್ದನ್ನು ಡೈರೆಕ್ಟರಿಗೆ ಕಳುಹಿಸಿದೆ.

ಶ್ರೀ ಎಸ್ ಎಂ. ಮರಿಯಪ್ಪ.—ಲೈಸೆನ್ಸ್ ಕೊಡ ಬೇಕಾದರೆ procedure ಏನು ?

ಶ್ರೀ ಎಚ್. ಸಿದ್ದವೀರಪ್ಪ.—1951ನೆಯ ಇನವಿಯ ಕಾನೂನಿನಲ್ಲಿದೆ. Rice Mill Control Order ನಲ್ಲಿ ಲೈಸೆನ್ಸ್ ಕೊಡುವ ವಿಚಾರವೂ ಇದೆ ; ಅದರ ಪ್ರಕಾರ ಕೊಡುತ್ತಾರೆ.

ಶ್ರೀ ಎಸ್. ಎಂ. ಮರಿಯಪ್ಪ.—ಯಾವ ಕಾನೂನಿಗೆ ಈ ಮಿಲ್ ಮಾಲೀಕರು ವಿರುದ್ಧವಾಗಿ ನಡೆದಿದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪ.—ಲೈಸೆನ್ಸ್ ಇಲ್ಲದೆ ಹರ್ ಮಾಡಿರುವುದು ಕಾನೂನಿಗೆ ವಿರುದ್ಧ.

ಶ್ರೀ ಎಸ್. ಎಂ. ಮರಿಯಪ್ಪ.—ಹರ್ ಮಾಡಿದ್ದು, ಸರ್ಕಾರ ಅಥವಾ ಆಹಾರ ಇಲಾಖೆಯ ಡೈರೆಕ್ಟರ ಅಥವಾ ಅಮಲ್ದಾರರ ಅಪ್ಪಣೆಯಿಲ್ಲದೆ ಮಾಡಿದ್ದಾರೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಡೈರೆಕ್ಟರೊಬ್ಬರೇ ಲೈಸೆನ್ಸ್ ಕೊಡುವುದು. ಈ ವಿಚಾರವನ್ನು ಇನ್ನೂ ತನಿಖೆ ಮಾಡುತ್ತಿದ್ದೇವೆ. The only licensing authority is the Director of Food Supplies. ಬಾಕಿಯವರು ಕೊಟ್ಟರೆ ಕಾನೂನು ಬದ್ಧವೆ ಅಥವಾ ಕಾನೂನು ವಿರುದ್ಧವೆ ಎಂಬುದು ತನಿಖೆಯಲ್ಲದೆ.

Mr. SPEAKER.—The Member may give up that Mill and put any other supplementary.

Sri S. M. MARIAPPA.—I am particularly concerned about that mill, Sir.

ಯಾವ ರಾಜಕೀಯ ಹಿನ್ನೆಲೆಯಿಂದ ಆ ಮಿಲ್ಲಿಗೆ ಲೈಸೆನ್ಸ್ ಕೊಡದೇಯಿದ್ದೀರಿ !

ಶ್ರೀ ಎಚ್. ಸಿದ್ದವೀರಪ್ಪ.—ಕಾನೂನು ಪ್ರಕಾರ ಮಾಡಿದ್ದಾರೆಯೇ ಹೊರತು ಯಾವ ರಾಜಕೀಯವೂ ಇಲ್ಲ.

ಶ್ರೀ ಎಸ್. ಎಂ. ಮರಿಯಪ್ಪ.—ಆ ಮಿಲ್‌ನವರು ನನ್ನ ಸಂಬಂಧಿಗಳೆಂದು ಲೈಸೆನ್ಸ್ ಕೊಡುವುದನ್ನು ನಿಲ್ಲಿಸಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲ, ತಪ್ಪುಮಾಡಿದರೆಂದು ನಿಲ್ಲಿಸಿದ್ದಾರೆ.

ಶ್ರೀ ಎಸ್. ಎಂ. ಮರಿಯಪ್ಪ.—ಈ ವರ್ಷ ಮೈಸೂರು ಜಿಲ್ಲೆಯ ಯಾವ ಯಾವ ಮಿಲ್ಲಿಗೆ ಲೈಸೆನ್ಸ್ ಕೊಟ್ಟಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್ ಬೇಕು. ಲೈಸೆನ್ಸ್ ಕೊಡತಕ್ಕವರು ಡೈರೆಕ್ಟರೆಂದು ಆಗಲೇ ಹೇಳಿದ್ದೇನೆ. Sir, I want to make a statement in this connection. ತಾವೇ ನನ್ನಲ್ಲಿ ಬಂದು ಈ ಮಿಲ್ಲಿನ ವಿಚಾರವಾಗಿ ಹೇಳಿದ್ದೀರಿ.

Mr. SPEAKER.—You need not ; please do not refer to that particular mill.

ಶ್ರೀ ಎಸ್. ಸಿದ್ದಪ್ಪ.—ಮಿಲ್ ಮಾಲೀಕರು ರೈತರಿಂದ ಮಿಲ್ಲಿಗೆ ಬತ್ತವನ್ನು ಅಳೆಸಿಕೊಳ್ಳುವಾಗ ಬತ್ತದಲ್ಲಿ ಹಸಿ ಇರುತ್ತದಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎಸ್. ಸಿದ್ದಪ್ಪ.—ಮಿಲ್ಲಿನಲ್ಲಿ ಸ್ವಲ್ಪ ದಿವಸ ಉಳಿದರೆ ಬತ್ತ ಆರಿವಾಸಿ ಬರುತ್ತದಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪ.—ಸ್ವಭಾವ ಸಿದ್ಧವಾದ ಕಾರಣಗಳಿಂದಾಗುವುದಕ್ಕೆ ಎಷ್ಟು allowance ಕೊಡಬಹುದೋ ಅಷ್ಟು ಕೊಡುತ್ತೇವೆ.

ಶ್ರೀ ಎಂ. ಲಿಂಗಣ್ಣ.—ಈ ಉತ್ತರದಲ್ಲಿ ಕೆಲವು ಮಿಲ್ಲುಗಳು conditions violate ಮಾಡಿವೆಯೆಂದು ಹೇಳಿದೆ, ಕಾರಣವೇನು ?

Mr. SPEAKER.—In fact this question was put, very many supplementary questions relating to this mill were put. The Member may please refer to previous questions.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಬೆಂಗಳೂರು, ಚಿತ್ರದುರ್ಗ ಮತ್ತು ಕೋಲಾರ ಈ ಮೂರು ಜಿಲ್ಲೆಗಳಲ್ಲಿ ಸರ್ಕಾರದವರೇ ಬತ್ತವನ್ನು ಕೊಂಡು ಹಲ್ ಮಾಡಿಸುತ್ತೇವೆಂದು ಹೇಳಿದ್ದೀರಿ ; ಇದೇ ರೀತಿ ಬೇರೆ ಜಿಲ್ಲೆಗಳಲ್ಲಿಯೂ ಏಕೆ ಮಾಡಬಾರದು ?

ಶ್ರೀ ಎಚ್. ಸಿದ್ದವೀರಪ್ಪ.—ಈ ಜಿಲ್ಲೆಗಳಲ್ಲಿ ಅಷ್ಟು ಬತ್ತ ಬರುತ್ತಿಲ್ಲ, ಇದೇ ಕಾರಣ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಶಿವಮೊಗ್ಗ ಜಿಲ್ಲೆಯ ಅನವಟ್ಟಿ, ಶಿರಾಳಕೊಪ್ಪ ಮುಂತಾದ ಸ್ಥಳಗಳಲ್ಲಿ 1949 ರಿಂದ ಒಂದೊಂದು ಮಿಲ್ಲೂ ಎಷ್ಟು ಬತ್ತವನ್ನು ಖರೀದಿ ಮಾಡಿಕೊಟ್ಟಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ವಿವರಗಳಿಲ್ಲ. ಹೆಚ್ಚಾಗಿ ವ್ಯಾಪಾರ ಮಾಡಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—Shortageಗೆ ಎಷ್ಟು 'ಮಾರ್ಜಿನ್' ಕೊಡುತ್ತೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಕಾನೂನು ಪ್ರಕಾರ ಇಂತಿಂಥ ಬತ್ತಕ್ಕೆ ಇಷ್ಟಿಷ್ಟು shortage ಎಂದಿದೆ, ಅದರಮೇಲಿದ್ದರೆ ಶೇಕಡ ಅರ್ಧದಷ್ಟು, ಹೀಗೆ ಮಾರ್ಜಿನ್ ಕೊಡುತ್ತೇವೆ. ಇಷ್ಟರಮೇಲೂ ಕಡಿಮೆ ಬಂದರೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಚೀಲಗಳಿಲ್ಲದೆ ಬತ್ತವನ್ನು ಹಾಗೆ ರಾಸಿ ಹಾಕಿತ್ತು. ಸಕಾಲಕ್ಕೆ ಚೀಲಗಳನ್ನು ಕೊಡದೆ.....

ಶ್ರೀ ಎಚ್. ಸಿದ್ದವೀರಪ್ಪ.—ಚೀಲಗಳನ್ನು ಕೊಡಬೇಕೆಂದು ರೂಲ್ಸ್ ಇದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಕಾರಣದಿಂದ ಕಡಿಮೆಬಂದಿದೆಯಲ್ಲವೇ ?

Mr. SPEAKER.—It is understood, ಸ್ವಲ್ಪ ಮಾರ್ಜಿನ್ ಕೊಡುತ್ತೇವೆಂದು ಹೇಳಿದ್ದಾರೆ. Any other supplementary ?

ಶ್ರೀ ವಿ. ಆರ್. ನಾಯ್ಡು.—ಕಂಟ್ರೋಲ್ ಇರುವ ನಗರಗಳಲ್ಲಿ ಅಕ್ಕಿ ಪಾಲಿಷ್ ಮಾಡಬಾರದೆಂದು ಕಟ್ಟಾಜ್ಞೆ ಕೊಟ್ಟಿದ್ದೀರಾ ?

Sri H. SIDDAVEERAPPA.—I want to know how that arises.

Mr. SPEAKER.—That does not arise out of this question.

Arsikere Cotton Sales Society.

Q.—664. Sri K. PANCHAKSHARIAH (Arsikere).—

Will the Government be pleased to state :—

(*a*) the quantity of cotton collected by the Arsikere Cotton Sales Society during 1951-52 and 1952-53 ;

(*b*) whether this Society is a member of the Arsikere Regulated Market Committee ;

(*c*) whether the Secretary working in this Society was appointed by Government and how many years back the appointment was made ;

(*d*) since how many years the Secretary of this Society is staying in Arsikere as Government official ;

(*e*) whether enquiry has been conducted by the Anti-Corruption Department on complaints received against this Secretary ?

A.—Sri H. SIDDAVEERAPPA (Minister for Home and Industries).—

(*a*) 1951-52—30,160 maunds and 7 lbs.

1952-53—10,784 maunds and 16 lbs.

(up to end of February 1953).

(*b*) No.

(*c*) Yes. Since the inception of the Society in 1942.

(*d*) The present Secretary who is a permanent Agricultural Inspector is working since October 1947.

(*e*) No.

ಶ್ರೀ ಕೆ. ಪಂಚಾಕ್ಷರಯ್ಯ.—1951-52ರಲ್ಲಿ 30,160 ಮಣ 7 ಪೌಂಡು ಶೇಖರಣೆಯಾಗಿದೆ, 1952-53ರಲ್ಲಿ 10,784 ಮಣ 16 ಪೌಂಡು ಆಗಿದೆ ಎಂದು ಉತ್ತರದಲ್ಲಿ ತಿಳಿಸಿದೆ. 1952-53ರಲ್ಲಿ ಹಿಂದಿನ ವರ್ಷದಷ್ಟು ಬಾರಿ ಪ್ರಮಾಣದಲ್ಲಿ ಶೇಖರಣೆಯಾಗದೇಯಿರಲು ಕಾರಣವೇನು ?

ಶ್ರೀ ಎಚ್. ಸಿದ್ದವೀರಪ್ಪ.—ಮಳೆಬೆಳೆ ಸರಿಯಾಗಿ ಆಗಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಜನರಲ್ಲಿ ಅಪನಂಬಿಕೆ ಹುಟ್ಟಿದ್ದರಿಂದ ಈ ರೀತಿ ಕಡಿಮೆಯಾಗಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ, ಇದಕ್ಕೆ ಕಾರಣ ವಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಸದಬರಾಯಿ ಮಾಡುವುದಕ್ಕೆ ಲೈಸೆನ್ಸ್ ಸೊಸೈಟಿಯವರು 45 ರೂಪಾಯಿಗಳು ಕೊಟ್ಟು ತೆಗೆದು ಕೊಂಡಿದ್ದಾರೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಕೆ. ಪಂಚಾಕ್ಷರಯ್ಯ.—ಅದರೆ ಉತ್ತರದಲ್ಲಿ ಇಲ್ಲವೆಂದು ಹೇಳಿದೆ.

ಶ್ರೀ ಎಚ್. ಸಿದ್ದವೀರಪ್ಪ.—45 ರೂಪಾಯಿಗಳನ್ನು ಕೊಟ್ಟು ಲೈಸೆನ್ಸ್ ತೆಗೆದುಕೊಂಡಿರುವುದು, ಷೇರು